2) ಇನ್ನು ಮುಂದೆ ರಸ್ತೆ ನಿರ್ವಹಣೆಯನ್ನು ವಾರ್ಷಿಕ ಗುತ್ತಿಗೆ ಆಧಾರದ ಮೇಲೆ ನಿರ್ವಹಿಸಲಾಗುವ ಯೋಜನೆ ಇರುವುದರಿಂದ ಖಾಲಿ ಹುದ್ದೆಗಳನ್ನು ತುಂಬುವ ಪ್ರಶ್ನೆ ಉದ್ಭವಿಸುವುದಿಲ್ಲ.

ಹಿರೇಕೆರೂರು ಲೋಕೋಪಯೋಗಿ ಇಲಾಖೆಯ ಯೋಜನೆ ಕುರಿತು.

1001 - ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರ್) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1-10-96ರಿಂದ 28-2-97ರ ವರೆಗೆ ಪ್ರತಿತಿಂಗಳು ಹಿರೇಕೆರೂರ್ ಲೋಕೋಪಯೋಗಿ ಇಲಾಖೆಯಲ್ಲಿ ಯೋಜನೆ ಹಾಗೂ ಯೋಜನೇತರದಲ್ಲಿ ಮಾಡಿದ ಕೆಲಸಗಳು ಯಾವುವು; ಅವುಗಳ ಪಾವತಿ ಆಗಿದೆಯೇ, ಅಥವಾ ಇಲ್ಲವೇ;*

ಆ) *1-10-96 ರಿಂದ 28-2-97ರವರೆ ಹಿರೇಕೆರೂರ್ ಉಪ್ಪ ವಿಭಾಗಕ್ಕೆ ಯೋಜನೆ, ಯೋಜನೇತರದಲ್ಲಿ ಬಂದ ಹಣ ಯಾವ ಕೆಲಸಕ್ಕೆ, ಆ ಹಣ ಬಳಸಿಕೊಳ್ಳಲಾಗಿದೆಯೇ?*

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ವಿವರ ಸಲ್ಲಿಸಿದೆ. 14.82 ಲಕ್ಷ ರೂ. ಪಾವತಿಸಬೇಕಿದೆ.

ಆ) ದಿನಾಂಕ 1-10-96ರಿಂದ 28-2-97ರವರೆಗೆ ಹಿರೇಕೊರೂರು ಉಪ ವಿಭಾಗಕ್ಕೆ ಬಿಡುಗಡೆ ಮಾಡಿದ ಹಣದಲ್ಲಿ ಉಪ ವಿಭಾಗದಲ್ಲಿ ಬರುವ ಕಾಮಗಾರಿಗಳು ದಿನಗೂಲಿ ನೌಕರರ ವೇತನ, ವಾಹನ ದುರಸ್ತಿ, ಇಂಧನ, ವಿದ್ಯುತ್ ಬಿಲ್ಲು ಮತ್ತು ಪರಿವೀಕ್ಷಣಾ ಮಂದಿರಗಳ ನಿರ್ವಹಣೆ ಇವುಗಳಿಗೆ ಬಳಸಿಕೊಳ್ಳಲಾಗಿದೆ.

ಧಾರವಾಡ ಲೋಕೋಪಯೋಗಿ ವಿಭಾಗದ ಯೋಜನೆಗಳು.

1002 - ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರ್) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಧಾರವಾಡ ಲೋಕೋಪಯೋಗಿ ವಿಭಾಗಕ್ಕೆ 1-4-96ರಿಂದ 28-2-97ರವರೆಗೆ ಯೋಜನೆ ಯೋಜನೇತರದಲ್ಲಿ ಯಾವ ಯಾವ ಲೆಕ್ಕ ಶೀರ್ಷಿಕೆಯಡಿಯಲ್ಲಿ ಬಂದ ಹಣವೆಷ್ಟು; ಹಾಗೂ ಯಾವ ತಾರೀಖಿಗೆ ಬಂದಿದೆ;*

ಆ) *ಈ ರೀತಿಯಲ್ಲಿ ಬಂದ ಹಣವನ್ನು ತಾಲ್ಲೂಕುವಾರು ಬಿಡುಗಡೆ ಮಾಡಿದ ಹಣವೆಷ್ಟು ಯಾವ ತಾರೀಖಿಗೆ 28-2-97ರವರೆಗೆ ತಾಲ್ಲೂಕುವಾರು ಆದ ವೆಚ್ಚದ ವಿವರ ಒದಗಿಸುವುದು?*

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ವಿವರ ಸಲ್ಲಿಸಿದೆ.

ಆ) ವಿವರ ಸಲ್ಲಿಸಿದೆ.